# ಹಕ್ಕಿ-ಹೂವು

ಇದೋ ಈ ಹೂವು
ಭೂಮಿಯ ನಗು.

ಅದೋ ಆ ಹಕ್ಕಿ
ಆಕಾಶದ ಬೆರಗು

ಹೂವು ಅರಳುವುದು
ಹಕ್ಕಿ ಹಾಡುವುದು

ಹಾಡಿಗೆ ಹೂತು
ಮರ ಮೈದುಂಬಿ
ಹಣ್ಣಾಗುವುದು...

ಹಣ್ಣು ಮಣ್ಣ ಸೇರಿ
ಗಿಡದ ಕಣ್ಣರಳುವುದು

ಮಣ್ಣೊಳಗೆ...
ಕಣ್ಣೊಡೆಯಲು ಕಾದಿವೆ
ನೂರು ಬಣ್ಣಗಳು!

ಬಾನೊಳಗೆ ರೆಕ್ಕೆ ಸುಟ್ಟು
ಮಿನುಗಿವೆ ಸಾವಿರ ದೀಪಗಳು!

● **ಸವಿತಾ ನಾಗಭೂಷಣ**

ಕಲೆ: ವಾಗೀಶ ಹೆಗಡೆ

